ಅತೀತದಿಂದ ಹರಿದು ಬಾಡಿದ ಪುಟಗಳೆಲ್ಲವೂ ಮತ್ತೆ ಹಸಿರಾಗಿ ತಮ್ಮ ಜಾಗದಲ್ಲಿ ವ್ಯವಸ್ಥಿತಗೊಂಡಂತೆ... ಕಮಲಿಯಂತೆಯೇ ಕಂಪು ಬೀರುತ್ತದೆ...

ಕಳೆದು ಹೋದ ಮನಸ್ಸಿಗೆ ತನ್ನಷ್ಟಕ್ಕೆ ತಾನೇ ಸಮಾಧಾನ ಸಿಗುತ್ತಿದೆ, ಗುಣಗಳನ್ನು ಮರೆಯಲು ಸಾಧ್ಯವಿಲ್ಲ, ನಮ್ಮ ಚೈತನ್ಯದ ದರ್ಪಣದಲ್ಲಿ ಪ್ರತಿಬಿಂಬಗೊಂಡ ಮಾರ್ಮಿಕ ಭಾವನೆಗಳ ಸೊಗಸನ್ನು ಮರೆಯಲಾಗದು. ವಿಷಯಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಉಬ್ಬರವಿಳಿತ ಬಂದರೆ ಬರಲಿ, ಜೀವನವನ್ನು ಅನುಭವಿಸಬೇಕು. ಶರೀರ ಏನಾದರಾಗಲಿ, ಅದಕ್ಕೊಂದು ಹೆಸರು ಬೇಕು. ಶರೀರದಲ್ಲಿ ಏನೂ ಅಡಗಿಲ್ಲ, ಎಲ್ಲವೂ ವಿಧಿಯ ಸೃಷ್ಟಿ. ವಯಸ್ಸಿನ ಅನುಪಾತದಲ್ಲಿ ಬದುಕುವ ಒಂದೇ ವಿಧದ ವ್ಯವಹಾರ, ಅದೇ ಸುಖ ದುಃಖದ ಅಲೆಗಳು, ಕಣ್ಣುಮುಚ್ಚಾಲೆಯಾಟ. ಅದೇ ಜೀವನ... ಪಾತ್ರಗಳು ಮಾತ್ರ ಬೇರೆ ಬೇರೆ. ದರ್ಶನದ ತಥ್ಯಗಳು ಮಾತ್ರ ಆನಂದಗೊಳಿಸುತ್ತವೆ, ಕಣ್ಣುಗಳಿಂದ ಒಳಮನಸ್ಸು ಗೋಚರವಾಗುತ್ತದೆ. ಆ ಕಣ್ಣುಗಳಿಂದಲೇ ಅಶೋಕ ನೋಡಲಾರಂಭಿಸಿದ. ಅವನು ಖುದ್ದು ಮಾಧವ ಬಾಬೂಗಳಾಗಲು ಸಾಧ್ಯ.

ಮತ್ತೆ ಕಿಡಕಿಯ ಆ ಕಡೆ ಅವಳು–ತದ್ರೂಪಿ ಕಮಲಿಯೇ.

ಅವಳ ವಿವಾಹ ಇನ್ನೂ ಆಗಿಲ್ಲ–ಆಗದಿರಲಿ; ವರಾಂಡದಲ್ಲಿ ಮಗುವೊಂದು ಅತ್ತ ಇತ್ತ ಓಟದ ಆಟವಾಡುತ್ತಿತ್ತು. ಅದು ಅವಳ ಮಗನಾಗಬಹುದಿತ್ತು...

ಆಗಲಿಲ್ಲ, ಆಗದಿರಲಿ–ಹೆಸರು ಮರೆತಾಗ ಎಲ್ಲವೂ ಸಮ.

ಯೋಚಿಸಿ ಯೋಚಿಸಿ ಮನಸ್ಸು ತುಂಬಿ ಬರುತ್ತದೆ. ದಿನಗಳು ಕಳೆಯುತ್ತಿವೆ, ಅವನು ಹಾರುತ್ತಾ ಹೋಗುತ್ತಿದ್ದಾನೆ, ಮನೆಯನ್ನು ಕಟ್ಟಲಿಲ್ಲ. ಯೌವನ ಕಳೆಯುವುದಕ್ಕೂ ಮೊದಲೇ ಮರೆವು ಬಂದಿದೆ, ಯಾಕೆ? ಅದು ಕಿಡಿ ಹೊತ್ತಿದ ಮನಸ್ಸಿನ ನೋವನ್ನು ಮರೆಯಲೋಸುಗ ಪ್ರಕೃತಿಯ ಲೇಪನವೇ?

ನೋಡು, ಆ ಮನುಷ್ಯ ಹೋಗುತ್ತಿದ್ದಾನೆ. ಅವನು ಮೂವತ್ತು ರೂಪಾಯಿಗಳನ್ನು ಸಾಲ ಪಡೆದಿದ್ದಾನೆ. ಆಪತ್ಕಾಲದಲ್ಲಿ ಸಾಲ ಪಡೆದು ಹೋಗಿದ್ದ. ನಂತರ ಎಲ್ಲವನ್ನೂ ಮರೆತ. ಅಶೋಕ ತಲೆಯೆತ್ತಿ ನೋಡಿದ. ಹೆಸರು ನೆನಪಾಗುತ್ತಿಲ್ಲ. ಆ ವ್ಯಕ್ತಿ ಬೇಗ ಬೇಗನೆ ಸಮೀಪದ ಗಲ್ಲಿಯಲ್ಲಿ ನುಗ್ಗುತ್ತಿದ್ದಾನೆ. ಅಶೋಕ ಕಾಯಲಿಲ್ಲ. ಸೈಕಲ್ಲಿನ ವೇಗವನ್ನು ಹೆಚ್ಚಿಸುತ್ತಾ ಟ್ರಿಂ ಟ್ರಿಂ ಎಂದು ಗಂಟೆ ಬಾರಿಸುತ್ತಾ ಅವನನ್ನೇ ಹಿಂಬಾಲಿಸಿ ಹೋದ.

## ಗೋಪಿನಾಥ ಮೊಹಂತಿ (1914–1991)

ಒರಿಯಾ ಭಾಷೆಯ ಲೇಖಕ ಗೋಪಿನಾಥ ಮೊಹಂತಿ 1936ರಲ್ಲಿ ಪಟ್ನಾ ವಿಶ್ವವಿದ್ಯಾಲಯದಿಂದ ಪ್ರಥಮ ಸ್ಥಾನದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಎಂ.ಎ.ಪದವಿಯನ್ನು ಪಡೆದರು. 1938ರಲ್ಲಿ ಒಡಿಯಾದ ಸರ್ಕಾರದ ಆಡಳಿತ ಸೇವೆಗೆ ಸೇರಿಕೊಂಡರು. ನಾಲ್ಕು ದಶಕಗಳಲ್ಲಿ ಅವರು 22 ಕಾದಂಬರಿಗಳು ಮತ್ತು 200ಕ್ಕೂ ಹೆಚ್ಚು ಕತೆಗಳನ್ನು ಒರಿಯಾ ಭಾಷೆಯಲ್ಲಿ ಬರೆದರು. ಅವರ 'ಮಾಟೀ ಮಟಾಲ್' ಕಾದಂಬರಿಗೆ 1973ರಲ್ಲಿ ಜ್ಞಾನಪೀಠ ಪುರಸ್ಕಾರ ಲಭಿಸಿದೆ.

## ಡಿ.ಎನ್. ಶ್ರೀನಾಥ್

ಕನ್ನಡ–ಹಿಂದಿ ಭಾಷೆಗಳಲ್ಲಿ ಪರಸ್ಪರ ಅನುವಾದ ಮಾಡುತ್ತಿರುವ ಶ್ರೀನಾಥರು ಇದುವರೆಗೆ 80 ಕೃತಿಗಳನ್ನು ಅನುವಾದಿಸಿದ್ದಾರೆ. ಪ್ರಸ್ತುತ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.